ಶ್ರೀ ಬಿ.ಶಿವಣ್ಣ :- ಮಾನ್ಯ ಉಪಾಧ್ಯಕ್ಷೆಯವರೇ, ವಿದ್ಯಾರ್ಥಿ ನಿಲಯಗಳನ್ನು ತೆರೆಯಬೇಕೆನ್ನುವುದು ಸರ್ಕಾರದ ನೀತಿ. ಆದರೆ ಎಲ್ಲಾ ಕಡೆಗಳಲ್ಲಿಯೂ ವಿದ್ಯಾರ್ಥಿ ನಿಲಯಗಳನ್ನು ತೆರೆಯಬೇಕೆಂದಿಲ್ಲ. ಏಕೆಂದರೆ, ಅದು ನಮ್ಮ ಆರ್ಥಿಕ ಪರಿಸ್ಥಿತಿ ಮತ್ತು ಅನುಕೂಲಗಳನ್ನು ಅವಲಂಬಿಸಿರುತ್ತದೆ. ಮಾನ್ಯ ಸದಸ್ಯರು ಹೇಳಿದಂತೆ ಬಹಳ ಒತ್ತಡ, ತೊಂದರೆ ಎಲ್ಲಿ ಇರುತ್ತದೆ ಅಂಥ ಕಡೆ ಪರವಾನಿಗಿಯನ್ನು ಕೇಳಿಕೊಂಡರೆ ಕನ್ಸಿಡರ್ ಮಾಡಬಹುದೆಂದು ಅನಿಸುತ್ತದೆ..

ಶ್ರೀ ಕೆ.ಸಿದ್ದಯ್ಯ :- ಅನುದಾನಿತ ವಿದ್ಯಾರ್ಥಿ ನಿಲಯಗಳಿಗೆ ನಿವೇಶನವನ್ನಾದರೂ ಸಹ ಒದಗಿಸಿಕೊಡಬೇಕೆಂದು ಕೇಳುತ್ತೇನೆ. ಅದಕ್ಕೆ ಯೋಜನೆ ಇಲ್ಲ ಎಂದು ಹೇಳಿದ್ದೀರಿ, ಇನ್ನು ಮೇಲಾದರೂ ಒಂದು ಯೋಜನೆಯನ್ನು ಮಾಡಿಕೊಟ್ಟರೆ ಬಡವರು ಮತ್ತು ಕೂಲಿಕಾರರು ಏನಾದರೂ ಏಡೆಡ್ ಹಾಸ್ಪೆಲ್‌ಗಳನ್ನಾದರೂ ಮಾಡಿಕೊಳ್ಳುತ್ತಾರೆ. ಆದ್ದರಿಂದ ಇನ್ನು ಮುಂದಾದರೂ ಇಂತಹ ಒಂದು ಯೋಜನೆಯನ್ನಾದರೂ ಹಾಕಿಕೊಂಡು ಕೆಲಸ ಮಾಡುತ್ತೀರ.

ಶ್ರೀ ಬಿ.ಶಿವಣ್ಣ :- ಅಂಥ ಯಾವುದೇ ಯೋಜನೆಯು ಇಲ್ಲ.

ವಿಷಯ:- ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಔಷಧ ಖರೀದಿಗಾಗಿ ಮಂಜೂರಾದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 472 (2320)

ಶ್ರೀ ಸಾಧತ್ ಅಲಿ ಖಾನ್ (ಚನ್ನಪಟ್ಟಣ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.?

ಅ 1988 ರಿಂದ ಇಂದಿನವರೆಗೆ ರಾಜ್ಯದ ವಿವಿಧ ಆಸ್ಪತ್ರೆಗಳಿಗೆ ಔಷಧ ಖರೀದಿಗಾಗಿ ಮಂಜೂರಾದ ಹಣವೆಷ್ಟು? (ವರ್ಷವಾರು ವಿವರ ನೀಡುವುದು)

ಆ ಈ ಬಾಬ್ತಿಗಾಗಿ ಜಿಲ್ಲಾ ಪರಿಷತ್‌ಗಳಿಗೆ ಮಂಜೂರಾದ ಅನುದಾನ.

ಇ 1988-89 ರಿಂದ 91ರವರೆಗೆ ಸಾರ್ವಜನಿಕ ಆಸ್ಪತ್ರೆ ಚನ್ನಪಟ್ಟಣ ಇಲ್ಲಿಗೆ ಔಷಧ ಮತ್ತು ಪೀಠೋಪಕರಣಗಳ ಖರೀದಿಗಾಗಿ ಬಿಡುಗಡೆಯಾದ ಹಣವೆಷ್ಟು? (1988-89 ರಿಂದ 1991ರವರೆಗೆ ವಿವರ ನೀಡುವುದು)

ಈ ಜಿಲ್ಲಾ ಪರಿಷತ್ತು ವಿವಿಧ ಆಸ್ಪತ್ರೆಗಳಿಗೆ ವಿಶೇಷವಾಗಿ ಚನ್ನಪಟ್ಟಣದ ನೂರು ಹಾಸಿಗೆ ಆಸ್ಪತ್ರೆಗೆ ಪೀಠೋಪಕರಣಗಳನ್ನು ಖರೀದಿಸುವಾಗ ಹಣದ ದುರುಪಯೋಗ ಮಾಡಿಕೊಂಡಿರುವುದು ನಿಜವೆ?

ಉ ಹಾಗಾದರೆ ಈ ಸಂಬಂಧದಲ್ಲಿ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಜಿ.ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ ಔಷಧ ಸರಬರಾಜಿಗಾಗಿ ಸರ್ಕಾರಿ ಔಷಧ ಮಳಿಗೆಗೆ ಬಿಡುಗಡೆಯಾದ ಅನುದಾನ (ಶೇ.60 ರಷ್ಟು)

1988-89	ರೂ. 1296-55 ಲಕ್ಷಗಳು
1989-90	ರೂ. 758-31 ಲಕ್ಷಗಳು
1990-91	ರೂ. 832-25 ಲಕ್ಷಗಳು
1991-92	ರೂ. 1482-05 ಲಕ್ಷಗಳು

ಆ

1988-89	ರೂ. 572-66 ಲಕ್ಷಗಳು
1989-90	ರೂ. 572-66 ಲಕ್ಷಗಳು
1990-91	ರೂ. 572-66 ಲಕ್ಷಗಳು
1991-92	ರೂ. 735-00 ಲಕ್ಷಗಳು

ಇ ಔಷಧಗಳು ಪೀಠೋಪಕರಣಗಳು

	ರೂ.	ರೂ.
1988-89	50,000	
1989-90	1,84,123	
1990-91	1,75,000	

ಈ ಇಲ್ಲ

ಉ ಉದ್ಭವಿಸುವುದಿಲ್ಲ

SRI SADATH ALI KHAN:- Sir, I had asked the amount sanctioned to the various Hospitals in the State for purchasing of drugs from 1988 to till date (details of yearwise may be furnished). The reply is, Budget released to GMS, Bangalore for supply of drugs (60%). The amount sanctioned to Zilla Parishads is 40%. That is the basis. But, the figures furnished here do not tally. In 1988-89, the GMS Bangalore has purchased drugs worth Rs.1296.55 lakhs, The amount sanctioned to the Zill Parishad for this purpose in 1988-89 is Rs. 572.66 lakhs. In 1988-89, totally it comes to Rs.1869.21 lakhs. In 1989-90, it is Rs.758.31 Lakhs and the amount sanctioned to Zill Parishad is Rs. 572.66 lakhs. It is more than 60%. In 1990-91, it is Rs. 832.25 lakhs worth drugs purchased by the Govt. Medical Stores, Bangalore and they have sanctioned to Zilla Parishad Rs.572.66 lakhs. In 1988-89, 1989-90 and 1990-91, the amount sanctioned to the Zilla Parishad is Rs.572.66 lakhs for all the three years. In 1991-92, they have purchased drugs worth Rs. 1482.05 lakhs and the amount sanctioned to Zilla Parishad is Rs. 735.00 lakhs. These figures furnished by the Government do not tally with each other. Secondly Sir, I would like to know from the Hon.Minister, what is the policy of the Government with regard to the purchase of drugs and distrubution of drugs to various Hospitals in the State? Whether the drugs are supplied on the basis of Hospital's bed strength or what is the basis on which the drugs are supplied ?

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಸರ್ಕಾರದ್ದು 60 ಪರ್ಸೆಂಟ್, ಜಿಲ್ಲಾ ಪರಿಷತ್ತಿನದು 40 ಪರ್ಸೆಂಟ್ ಅದರೆ, ಬಿಡುಗಡೆಯಾಗಿರತಕ್ಕ ಔಷಧಿಯ ಮೊತ್ತದಲ್ಲಿ ವ್ಯತ್ಯಾಸ ಬರುತ್ತಿದೆ. 40 ಪರ್ಸೆಂಟ್ ಈಕ್ವಲ್ಲಾಗಿ ಬರುತ್ತಿಲ್ಲ, ಆ ತಾರತಮ್ಯವನ್ನು ಸರಿಪಡಿಸಬೇಕು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಮತ್ತೆ ಆಸ್ಪತ್ರೆಗಳಿಗೆ ರೋಗಿಗಳ ಸಂಖ್ಯೆಯ ಆಧಾರದ ಮೇಲೆ ಅಥವಾ ಹಾಸಿಗೆಗಳ ಸಂಖ್ಯೆಯ ಆಧಾರದ ಮೇಲೆ ಔಷಧಿಯನ್ನು ಒದಗಿಸುತ್ತೀರಿ ಎನ್ನತಕ್ಕ ಪ್ರಶ್ನೆಯನ್ನು ಕೇಳಿದ್ದಾರೆ. ಸನ್ಮಾನ್ಯ ಅಧ್ಯಕ್ಷಿಣಿಯವರೇ, ಈಗಾಗಲೇ ಅದಕ್ಕೆ ನಿಗದಿ ಮಾಡಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿದ್ದರೆ 30 ಸಾವಿರ ರೂಪಾಯಿಗಳ

ಔಷಧಿಯನ್ನು ಕೊಡುವುದು, ಸಾಮೂಹಿಕ ಆರೋಗ್ಯ ಆಸ್ಪತ್ರೆಗಳಾಗಿದ್ದರೆ 50 ಸಾವಿರ ರೂಪಾಯಿಗಳ ಔಷಧಿಯನ್ನು ಕೊಡುವುದು. ತಾಲ್ಲೂಕು ಮಟ್ಟದ ಮತ್ತು ಅದಕ್ಕಿಂತ ಹೆಚ್ಚಿನ ಹಾಸಿಗೆಗಳುಳ್ಳದ್ದಾದರೆ 1 ಲಕ್ಷ ಅಥವಾ ಒಂದು ಕಾಲು ಲಕ್ಷ ರೂಪಾಯಿಗಳ ಔಷಧಿಯನ್ನು ಕೊಡುವುದು. ಹೀಗೆ ಅದರ ಅಗತ್ಯತೆಯನ್ನು ನೋಡಿ ನೋಡಿ ದರವನ್ನು ಫಿಕ್ಸ್ ಮಾಡುವ ವ್ಯವಸ್ಥೆಯನ್ನು ನಮ್ಮ ಇಲಾಖೆಯವರು ಮೊಗಲಿನಿಂದಲೂ ಮಾಡಿದ್ದಾರೆ. ಆದ್ದರಿಂದ ಈ ಹಾಸಿಗೆಗಳ ಸಂಖ್ಯೆಯನ್ನು ತಾಲ್ಲೂಕು ಮಟ್ಟ ಮತ್ತು ಜಿಲ್ಲಾ ಮಟ್ಟದಲ್ಲಿ ಹೆಚ್ಚು ಮಾಡಿದಾಗಲೆಲ್ಲಾ ಆಸ್ಪತ್ರೆಗಳ ಔಷಧಿ ಮೊತ್ತವೂ ಕೂಡ ಹೆಚ್ಚು ಕಡಿಮೆ ಆದುದರಿಂದ ಈ ಫಿಗರ್‌ನಲ್ಲಿ ವ್ಯತ್ಯಾಸವಿದೆ. 40 ರಿಂದ 60 ರ ಪ್ರಮಾಣ ಏನು ಇದೆ, ಅದರಲ್ಲಿ ವ್ಯತ್ಯಾಸವಿದೆ ಎನ್ನುವುದನ್ನು ಅವರ ಗಮನಕ್ಕೆ ತರಬಯಸುತ್ತೇನೆ. ಇದರಲ್ಲಿ ಇನ್ನೊಂದು ದೋಷವಿದೆ. ನಮ್ಮ ರೇಟ್ ಕಾಂಟ್ರಾಕ್ಟ್ ಪ್ರಕಾರ ಆ ಸಂಬಂಧಪಟ್ಟ ತಯಾರಕರಿಗೆ ಔಷಧಿಯನ್ನು ಒದಗಿಸುವುದಕ್ಕೆ ಬೇಡಿಕೆಯನ್ನು ಸಲ್ಲಿಸುತ್ತಾರೆ. ಕೆಲವೊಂದು ಸಂದರ್ಭದಲ್ಲಿ ಸಂಬಂಧಪಟ್ಟಂಥ ಔಷಧಿ ಸಕಾಲಕ್ಕೆ ಸಪ್ಲೈ ಆಗುವುದಿಲ್ಲ. ಆದ್ದರಿಂದ ಈ ಅಂಕಿ ಅಂಶಗಳು ವ್ಯತ್ಯಾಸವಾಗುವಂತಹ ಸಾಧ್ಯತೆಗಳು ಉಂಟು. ಈ ಹಿನ್ನೆಲೆಯಲ್ಲಿ ಸರ್ಕಾರ ಈ ವರೆಗೆ ಕೊಂಡಂಥ ಔಷಧಿಯನ್ನು ಸದಸ್ಯರು ಕೇಳಿರುವ ರೀತಿಯಲ್ಲಿ ಒದಗಿಸಿದ್ದೇವೆ. ಅದನ್ನು ಈಗಾಗಲೇ ನಾವು ಕೊಟ್ಟಿದ್ದೇವೆ ಮತ್ತು ಜಿಲ್ಲಾಪರಿಷತ್‌ಗಳಲ್ಲಿ ಒಂದೊಂದು ಜಿಲ್ಲೆಯಲ್ಲಿ ಒಂದೊಂದು ರೀತಿ ಅವರು ಔಷಧಕೊಳ್ಳತಕ್ಕಂಥ ರೀತಿಯಲ್ಲಿ ನಿಯಮಗಳನ್ನು ಅವರು ಹಾಕಿಕೊಕಂಡಿದ್ದಾರೆ. ಸಕಾಲಕ್ಕೆ ನಮಗೆ ಇನ್‌ಫರ್‌ಮೇಷನ್ ಬಂದಿರುವುದಿಲ್ಲ. ಆ ಕಾರಣದಿಂದಲೂ ಕೂಡ ಇದರ ಅಂಕಿ ಅಂಶಗಳು ವ್ಯತ್ಯಾಸವಾಗದಿರುವುದಕ್ಕೆ ಅವಕಾಶವಿದೆ. ಅಂತೂ ಸರ್ಕಾರ ಕೊಟ್ಟಂತಹ ಆಯವ್ಯಯವನ್ನು 60,40ರ ಅಂದಾಜಿನಲ್ಲಿ ವಿತರಣೆ ಮಾಡುವಂತಹ ವ್ಯವಸ್ಥೆಯನ್ನು ನಾವು ಮಾಡಿಕೊಂಡಿದ್ದೇವೆ.

ಶ್ರೀ ಕೆ.ಲಕ್ಕಣ್ಣ:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಪ್ರತಿ ಸರ್ಕಾರ ಆಸ್ಪತ್ರೆಯಲ್ಲಿ ಯಾವುದೇ ಔಷಧಿಗಳನ್ನು ಸರಿಯಾಗಿ ಕೊಡುತ್ತಿಲ್ಲ. ಕೇಳಿದರೆ ಔಷಧಿ ಸರಬರಾಜು ಆಗಿಲ್ಲವೆಂದು ಹೇಳುತ್ತಾರೆ. ಕೊಟ್ಟಂತಹ ಔಷಧಿಗಳಿಗೆ ಸರಿಯಾಗಿ , ವ್ಯವಸ್ಥಿತವಾಗಿ ರೋಗಿಗಳಿಗೆ ಕೊಡುತ್ತಾರೆಂದು ಮಾಹಿತಿಗಳೇನಾದರೂ ಇಟ್ಟಿದ್ದಾರೆಯೇ ಎಂದು ತಮ್ಮ ಮುಖಾಂತರ ಮಾನ್ಯ ಆರೋಗ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಸದಸ್ಯರು ಜನಸಾಮಾನ್ಯವಾದಂತಹ ಒಂದು ಅಭಿಪ್ರಾಯವನ್ನು ಪ್ರಶ್ನೆ ಮೂಲಕ ಕೇಳುತ್ತಿದ್ದಾರೆ. ಆಸ್ಪತ್ರೆಗಳಲ್ಲಿ ಔಷದಿ ಕೊಡುತ್ತಿದ್ದಾರೆ. ಆದರೆ ರೋಗಿಗಳು ಇರುವಷ್ಟು ಸಂಖ್ಯೆಯಲ್ಲಿ ಕೊಡುವುದಕ್ಕೆ ಆಗಲಿಲ್ಲ. ನಮ್ಮ ನಿರೀಕ್ಷೆಗಿಂತಲೂ ಹೆಚ್ಚು ರೋಗಿಗಳ ಒತ್ತಡ ಜಾಸ್ತಿ ಆದಾಗ ಆಸ್ಪತ್ರೆಯಲ್ಲಿ ಇದ್ದಂಚಹ ಔಷಧಿಯನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಆದ್ದರಿಂದ ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಔಷಧಿ ಸಿಗುವುದಿಲ್ಲ ಎನ್ನುವ ಅಭಿಪ್ರಾಯ ಕೂಡ ನಮ್ಮ ಗಮನಕ್ಕೆ ಬಂದಿದೆ. ಈಗ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 30 ಸಾವಿರ ರೂಪಾಯಿಯನ್ನು ನಾವು ನಿಗಧಿ ಮಾಡಿದ್ದೇವೆ. ಆದರೆ ದೊಡ್ಡ ಗ್ರಾಮವಿದ್ದು ಕಾಯಿಲೆಗಳು ಜಾಸ್ತಿ ಬರದಂತಹ ಸಂದರ್ಭದಲ್ಲಿ ನಾವು ಕೊಟ್ಟಂತಹ 30 ಸಾವಿರ ರೂಪಾಯಿ ಸಾಲದೇ ಹೋಗಬಹುದು. ಆಗ ಅವರು ಖಾಸಗಿಯಾಗಿ ಕೊಳ್ಳತಕ್ಕಂತಹ ಪರಿಸ್ಥಿತಿ ಉದ್ಭವವಾಗುತ್ತದೆ. ಅಂತಹ ಸಂದರ್ಭದಲ್ಲಿ ನ್ಯಾಚುರಲಿ ಸರ್ಕಾರ ಔಷದಿ ಒದಗಿಸಿಲ್ಲ, ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿ ಕೊಟ್ಟಿಲ್ಲವೆಂದು ಹೇಳುವುದಕ್ಕೆ ಅವಕಾಶವಿದೆ. ಆದರೆ ಎಲ್ಲ ಸರಿಯಾಗಿದೆ ಎಂದು ಹೇಳುವಷ್ಟು ಮಟ್ಟಿಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಹೇಳಿದ ಹಾಗೆ ಇರತಕ್ಕಂತಹ ನ್ಯೂನತೆಗಳು ಗಮನಕ್ಕೆ ಬಂದ ನಂತರ ಸರಿಪಡಿಸತಕ್ಕಂತಹ ಕ್ರಮವನ್ನು ಕೈಗೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಸನ್ಮಾನ್ಯ ಅಧ್ಯಕ್ಷಿಣಿಯವರೇ, ಮಾನ್ಯ ಆರೋಗ್ಯ ಮಂತ್ರಿಗಳು ಅವರ ಉತ್ತರದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಒಂದು ಪಿ.ಹೆಚ್.ಯು ಮತ್ತು ಪಿ.ಎಸ್.ಸಿ.ಗಳಿಗೆ 30 ಸಾವಿರ

ರೂಪಾಯಿಗಳನ್ನು ಔಷಧಿಗಾಗಿ ಕೊಡಲಾಗುವುದು ಎಂದು ಹೇಳಿದ್ದಾರೆ. ಇಡೀ ರಾಜ್ಯದಲ್ಲಿ ಆದರಲ್ಲೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನೇಕ ಪಿ.ಹೆಚ್.ಸಿ ಮತ್ತು ಪಿ.ಹೆಚ್.ಯು.ಗಳಲ್ಲಿ ಡಾಕ್ಟರ್‌ಗಳೇ ಇಲ್ಲ. ಅನೇಕ ಕಡೆ ಆಸ್ಪತ್ರೆಗೆ ತಕ್ಕಂತಹ ಸಿಬ್ಬಂದಿ ವರ್ಗವಿಲ್ಲ. ಅಂತಹ ಆಸ್ಪತ್ರೆಗಳಿಗೂ ಈ ಹಣವನ್ನು ಬಿಡುಗಡೆ ಮಾಡಿದ್ದೀರಾ ಎಂದು ನನ್ನ ಪ್ರಶ್ನೆ.

ಶ್ರಿ ಜಿ.ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷಣಿಯವರೇ, ಇದನ್ನೆಲ್ಲಾ ನಿಯಂತ್ರಣ ಮಾಡತಕ್ಕಂತಹವರು ಜಿಲ್ಲಾಮಟ್ಟದಲ್ಲಿ ಪಿ.ಹೆಚ್.ಯು.ಗಳು ಇದ್ದಾರೆ. ಒಂದು ವೇಳೆ ಡಾಕ್ಟರ್‌ಗಳು ಇಲ್ಲದೇ ಆಸ್ಪತ್ರೆ ಬಾಗಿಲು ಹಾಕಿದ್ದರೆ ಬಹುಶ: ಹೆಚ್ಚು ಒತ್ತಡ ಎಲ್ಲಿ ಇದೆಯೋ ಅಂತಹ ಆಸ್ಪತ್ರೆಗಳಿಗೆ ಕೊಡತಕ್ಕಂತಹ ಒಂದು ಅವಕಾಶವನ್ನು ಸರ್ಕಾರಿ ಸುತ್ತೋಲೆಯ ಮೂಲಕ ಕೊಡಲಾಗಿದೆ. ಆದ್ದರಿಂದ ಆಸ್ಪತ್ರೆಗೆ ಕೊಟ್ಟಂತಹ ಔಷಧಿ ಹಾಗೆಯೇ ಉಳಿಯುತ್ತದೆನ್ನುವ ಕಲ್ಪನೆ ಸರಿಯಾದುದಲ್ಲ. ಆ ಔಷಧಿಯನ್ನು ಜಾಸ್ತಿ ಇರತಕ್ಕಂತಹ ಕಡೆಗಳಿಗೆ ಕೊಡತಕ್ಕಂತಹ ವ್ಯವಸ್ಥೆ ಮಾಡಲಾಗುತ್ತಿದೆ.

ಶ್ರಿ ಎಂ.ಮಹದೇವ್:- ಮಾನ್ಯ ಅಧ್ಯಕ್ಷಣಿಯವರೇ,. ಸರ್ಕಾರವೇನೋ ಆಸ್ಪತ್ರೆ ಗಳಿಗೆ ಔಷಧಿಗಳನ್ನು ಸರಬರಾಜು ಮಾಡುತ್ತಿದೆ. ಆದರೆ ಆ ಔಷಧಿಗಳ ಗುಣಮಟ್ಟ ಸರಿಯಾಗಿ ಇದೆಯೇ ಮತ್ತು ಸರಬರಾಜು ಮಾಡತಕ್ಕಂಥ ಔಷಧಿಗಳು ಸರಿಯಾಗಿ ರೋಗಿಗಳಿಗೆ ತಲುಪುತ್ತಿವೆಯೋ, ಅದರಲ್ಲಿ ದುರುಪಯೋಗವಾಗುತ್ತಿರತಕ್ಕಂಥ ದೂರುಗಳು ಬರುತ್ತಾ ಇದೆ. ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರಿ ಜಿ.ಪುಟ್ಟಸ್ವಾಮಿಗೌಡ:- ಎಲ್ಲೆಲ್ಲಿ ದುರುಪಯೋಗವಾಗಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೋ ಅಲ್ಲೆಲ್ಲ ಸೂಕ್ತ ತನಿಖೆಗಳನ್ನು ಮಾಡಿಸಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಪರಿಪಾಟ ಈಗಾಗಲೇ ಸರ್ಕಾರದಲ್ಲಿ ಇದೆ. ಹಲವಾರು ನಿದರ್ಶನಗಳಲ್ಲಿ ಈಗಾಗಲೇ ನಾವು ಕ್ರಮ ತೆಗೆದಂಕೊಂಡಿದ್ದೇವೆ. ಅಂತಹ ಯಾವುದಾದರೂ ಇದ್ದರೆ ಅದನ್ನು ಸನ್ಮಾನ್ಯ ಸದಸ್ಯರು ಹೇಳಿದರೆ ಅವರ ಮೇಲೆ ಕೂಡ ಈ ರೀತಿಯ ಕ್ರಮ ತೆಗೆದುಕೊಳ್ಳುವಂಥ ಕೆಲಸವನ್ನು ಮಾಡುತ್ತೇವೆ.

ಶ್ರಿ ಎಂ.ಮಹದೇವ್:- ಗುಣಮಟ್ಟದ ಬಗ್ಗೆ ನಾನು ಪ್ರಸ್ತಾಪ ಮಾಡಿದೆ, ಅದಕ್ಕೆ ಉತ್ತರ ಇಲ್ಲ. ಮತ್ತೆ ನಿಖರವಾಗಿ ಮೈಸೂರು ಜಿಲ್ಲಾ ಪರಿಷತ್ತಿನಲ್ಲಿ ಕೆಲವು ಆಸ್ಪತ್ರೆಗಳಿಗೆ ಕೊಟ್ಟಿರತಕ್ಕ ಔಷಧಿಗಳ ಗುಣಮಟ್ಟ ಸರಿಯಾಗಿ ಇಲ್ಲ, ದುರುಪಯೋಗವಾಗಿದೆ ಎನ್ನುವಂಥ ದೂರು ಸರ್ಕಾರದ ಗಮನಕ್ಕೆ ಬಂದಿದೆ. ಅದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ? ಇದನ್ನು ನಿರ್ದಿಷ್ಟವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ ಇದರ ಬಗ್ಗೆ ರಿಪೋರ್ಟ್ ಸಹ ಇದೆ.

ಛೇರ್ಮನ್ :- ಇನ್ನು ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ, ಅವರ ಗಮನಕ್ಕೆ ಬಂದಿಲ್ಲ.

ಶ್ರಿ ಎಂ.ಮಹದೇವ್:- ಗುಣಮಟ್ಟಕ್ಕೆ ಮೊದಲನೆಯ ಪ್ರಶ್ನೆ ಹಾಕಿದ್ದೆ. ದುರುಪಯೋಗದ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ ಬಂದರೆ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಗುಣಮಟ್ಟದ ಬಗ್ಗೆ ನಾನು ಉತ್ತರ ನಿರೀಕ್ಷಣೆ ಮಾಡುತ್ತಿದ್ದೇನೆ. ಮತ್ತು ದುರುಪಯೋಗದ ಬಗ್ಗೆ ನಿರ್ದಿಷ್ಟವಾಗಿ ಹೇಳಿದರೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ. ನಾನು ನಿರ್ದಿಷ್ಟವಾಗಿ ಹೇಳಿದ್ದೇನೆ. ಆದ್ದರಿಂದ ಈ ಎರಡಕ್ಕೂ ಉತ್ತರವನ್ನು ಅವರಿಂದ ನಿರೀಕ್ಷೆ ಮಾಡುತ್ತಿದ್ದೇನೆ.

ಶ್ರಿಮತಿ ದಮಯಂತಿ ಬೋರೇಗೌಡ:- ಅಧ್ಯಕ್ಷರೆ, ಇದ್ದಷ್ಟೇ ಹಣದಲ್ಲಿ ಅಲ್ಲಿಯ ಬೇಡಿಕೆಗೆ ಅನುಗುಣವಾಗಿ ಒಳ್ಳೆಯ ಗುಣಮಟ್ಟದ ಔಷಧಿ ಸರಬರಾಜು ಆಗಲಿ. ಒಂದು ಹಾಸ್ಪಲ್‌ಗೆ ಬೇಕಾದಂಥ ಔಷಧಿ ಇನ್ನೊಂದು ಹಾಸ್ಪಲ್‌ಗೆ ಬೇಕಾಗುವುದಿಲ್ಲ. ಕೆಲವು ಕಡೆ ಮಲೇರಿಯಾ ಜಾಸ್ತಿ ಇರಬಹುದು, ಮತ್ತೊಂದು ಕಡೆ ಇನ್ನೊಂದು ಕಾಯಿಲೆ ಜಾಸ್ತಿ ಇರಬಹುದು. ಆದ್ದರಿಂದ ನಿಮ್ಮ ಸಪ್ಲೈ ಅಲ್ಲಿಯ ಬೇಡಿಕೆಗೆ ಅನುಗುಣವಾಗಿ ಇರಬೇಕು, ಸ್ವಲ್ಪ ಫ್ಲಕ್ಸಿಬಲ್ ಆಗಿ ಮಾಡಬೇಕು ಎಂದು ಹೇಳುತ್ತೇನೆ, ಆ ರೀತಿ ಮಾಡುತ್ತೀರಾ ?

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೆ, ಶ್ರೀಮತಿ ದಮಯಂತಿ ಬೋರೇಗೌಡರು ಹೇಳಿದಂಥ ಸಲಹೆ ಬಹಳ ಸಮಂಜಸವಾಗಿದೆ: ಸರ್ಕಾರವು ಕೂಡ ಆ ದಿಸೆಯಲ್ಲಿ ಹೆಚ್ಚು ಕ್ರಮವನ್ನು ತೆಗೆದುಕೊಳ್ಳುತ್ತಿದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಶ್ರೀ ಎ.ಕೆ.ಅನಂತಕೃಷ್ಣ:- ಎಲ್.ಹೆಚ್.ನಲ್ಲಿ ಇರುವ ಡಿಸ್‌ಪೆನ್‌ಸರಿಗೆ ಬೇಕಾದ ಔಷಧಿಗಳನ್ನೆಲ್ಲ ಶ್ರೀಮತಿ ದಮಯಂತಿ ಬೋರೇಗೌಡ ಅವರು ಹೇಳಿದ ರೀತಿಯಲ್ಲಿ ಕೊಡುತ್ತೀರಾ?

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಕೊಡುತ್ತಿದ್ದೇವೆ. ಹಿರಿಯ ಸದಸ್ಯರ ಗಮನಕ್ಕೆ ತರುತ್ತೇನೆ, ಎಲ್.ಹೆಚ್.ನಲ್ಲಿಯ ಡಿಸ್‌ಪೆನ್ಸರಿಗೆ ನಾವು ಯಾವುದೇ ವಿಧವಾದಂತಹ ಮಿತಿಯನ್ನು ಹಾಕಿಲ್ಲ. ಸದಸ್ಯರು ಯಾವ ಔಷಧಿ ಕೇಳಿದರೂ ಕೊಡಿ ಎನ್ನುವಂಥ ವಿಶೇಷ ಆಜ್ಞೆಯನ್ನು ನಾವು ಕೊಟ್ಟಿದ್ದೇವೆ. ಅವರು ಕೇಳಿದಂಥ ಔಷಧಿಯನ್ನೇ ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಎಂ.ಮಹದೇವ್:- ಮಾನ್ಯ ಸಚಿವರು ಎಲ್.ಹೆಚ್.ನಲ್ಲಿ ಇರುವುದಿಲ್ಲ, ಅವರು ಔಷಧಿ ತೆಗೆದುಕೊಳ್ಳುತ್ತಿಲ್ಲ. ಆದರೆ ನಮಗೆ ಅದರ ಪ್ರಾಬ್ಲಮ್ ಇರುವದು. ನಾವು ಕೇಳುವಂಥ ಔಷಧಿ ಬಿಟ್ಟರೆ ಬೇರೆ ಯಾವುದೂ ಇರುವುದಿಲ್ಲ.

ಶ್ರೀ ಕೆ. ಸೋಮಪ್ಪ ಸುವರ್ಣ:- ಮಾನ್ಯ ಅಧ್ಯಕ್ಷರೆ, ಈ ಔಷಧಿಗಳನ್ನು ತಯಾರಿಕಾ ಘಟಕಗಳಿಂದಲೇ ಪರ್‌ಚೇಸ್ ಮಾಡುವುದು ಒಳ್ಳೆಯದು. ಏಕೆಂದರೆ, ಮಧ್ಯವರ್ತಿಗಳೆಲ್ಲಾ ಸೇರಿಕೊಂಡು ಕಳಪೆ ಮಟ್ಟದ ಔಷಧಿಗಳನ್ನು ನಮ್ಮ ಡಿಪೋಗಳಿಗೆ ಕಳುಹಿಸುತ್ತಿದ್ದಾರೆ ಎಂಬ ದೂರುಗಳು ಬರುತ್ತಿದೆ. ಕರ್ನಾಟಕದಲ್ಲಿ ತಯಾರು ಆಗುವಂಥ ಔಷಧಿಗಳನ್ನು ನಾವು ಪಡೆದುಕೊಳ್ಳದೆ ಈ ಮಧ್ಯವರ್ತಿಗಳು ಬೇರೆ ಕಡೆಯಿಂದ ಪರ್‌ಚೇಸ್ ಮಾಡಿ ಕಳುಹಿಸುವಾಗ ಗುಣಮಟ್ಟವನ್ನು ಕಡಿಮೆಗೊಳಿಸಿ ನಮ್ಮ ಊರಿನ ಕೈಗಾರಿಕೆಗಳಿಗೆ ತೊಂದರೆಯಾಗಿದೆ ಎಂದು ಸಣ್ಣ ಕೈಗಾರಿಕೆಗಳು ದೂರುತ್ತಾ ಇವೆ. ಆದ್ದರಿಂದ ತಾವು ಇದನ್ನು ಪರಿಶೀಲಿಸಿ ಗುಣಮಟ್ಟವನ್ನು ಕಾಯ್ದುಕೊಳ್ಳುವಂಥ ಮತ್ತು ನಮ್ಮ ಕರ್ನಾಟಕದಲ್ಲಿ ತಯಾರಾಗುವ ಔಷಧಿಗಳನ್ನು ಪಡೆಯುವಂತಹ ಯಾವ ತರಹದ ಯೋಜನೆಯನ್ನು ಮಾಡಿದ್ದೀರಿ ಎಂದು ತಿಳಿಸಿದರೆ ಒಳ್ಳೆಯದೆಂದು ನಾನು ಆಶಿಸುತ್ತೇನೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷಿಣಿಯವರೆ, ಶ್ರೀ ಸೋಮಪ್ಪ ಸುವರ್ಣರವರು ಬಹಳ ಅತ್ಯಂತ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ನಾವು ಈಗಾಗಲೇ ನಿರ್ಣಯ ತೆಗೆದುಕೊಂಡಿದ್ದೇವೆ. ಮಧ್ಯವರ್ತಿಗಳಿಂದ ಔಷಧಿಗಳನ್ನು ಕೊಳ್ಳಬಾರದು ಎಂದು ನಾವು ತೀರ್ಮಾನ ತೆಗೆದುಕೊಂಡಿರುವುದರ ಪರಿಣಾಮವಾಗಿ ತಯಾರಕರಿಂದಲೇ ಔಷಧಿಗಳನ್ನು ಕೊಳ್ಳಬೇಕು ಎನ್ನತಕ್ಕಂಥಾದ್ದರ ಹಿನ್ನೆಲೆಯಲ್ಲಿ ಈಗಾಗಲೇ ಹೈಪವರ್ ಕಮಿಟಿಯವರು ಸಂಬಂದಪಟ್ಟಂತ ಪರಿಶೀಲನಾ ಕಾರ್ಯವನ್ನು ಮಾಡುತ್ತಿದ್ದಾರೆ. ಶೀಘ್ರದಲ್ಲೇ ಅದರ ಅಂತಿಮ ನಿರ್ಧಾರ ಹೊರಬೀಳುವುದರಿಂದ ಮಧ್ಯವರ್ತಿಗಳಿಗೆ ಇನ್ನು ಮುಂದೆ ಈ ಔಷಧಿಯನ್ನು ಸಪ್ಲೈ ಮಾಡತಕ್ಕಂಥದ್ದರಲ್ಲಿ ಯಾವ ವಿಧವಾದಂತಹ ಹಸ್ತಕ್ಷೇಪ ಇರುವುದಿಲ್ಲ ಎನ್ನತಕ್ಕಂಥಾದ್ದನ್ನು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ಮತ್ತೊಂದು ಪ್ರಮುಖವಾದ ಮಾತನ್ನು ಶ್ರೀಮತಿ ದಮಯಂತಿಯವರು ಹೇಳಿದರು. ನೀಡ್ ಬೇಸ್ಡ್ ಡ್ರಗ್ ಆಗಬೇಕು ಮತ್ತು ಅಲ್ಲಿಯೇ ತೆಗೆದುಕೊಳ್ಳತಕ್ಕಂಥಾದ್ದಕೆ ಅವಕಾಶ ಆಗುವ ರೀತಿ ಸ್ವಲ್ಪ ಫ್ಲಕ್ಸಿಬಿಲಿಟಿ ಇಟ್ಟುಕೊಂಡು ಮಾಡಬೇಕು. ಎಂದು ಹೇಳಿದರು. ಅದಂತೂ ಬಹಳ ಅತ್ಯುತ್ತಮವಾದ ಸಲಹೆ. ಆ ದಿಸೆಯಲ್ಲಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಆದ್ದರಿಂದಲೇ ನಾವು ಶೇಕಡ 40 ರಷ್ಟನ್ನು ಸ್ಥಳೀಯವಾಗಿ ಕೊಳ್ಳುವುದಕ್ಕೋಸ್ಕರವಾಗಿ ಜಿಲ್ಲಾ ಪರಿಷತ್ತಿಗೆ ಹಣ ಬಿಡುಗಡೆ ಮಾಡಬೇಕು ಎನ್ನುವಂಥ ತೀರ್ಮಾನ ಮಾಡಿದ್ದೇವೆ ಅದು ಎಷ್ಟು ಪರಿಣಾಮಕಾರಿಯಾಗಿದೆ ಎನ್ನುವುದನ್ನು ಈಗಾಗಲೇ ಪರಿಶೀಲನೆ ಮಾಡಿದ್ದೇವೆ. ಆ ಒಂದು ಹಿನ್ನೆಲೆಯಲ್ಲಿ ಆಯಾಯ ಸ್ಥಳಕ್ಕೆ ಬೇಕಾದಂತಹ ಔಧಿಯನ್ನು ಕೊಳ್ಳತಕ್ಕಂಥ ವ್ಯವಸ್ಥೆಯನ್ನು ಕೂಡ ನಾವು ಮಾಡುತ್ತಿದ್ದೇವೆ.

ಶ್ರೀ ಎಂ.ಮಹದೇವ್:- ನಿರ್ದಿಷ್ಟವಾದ ಪ್ರಕರಣ ಹೇಳಿ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದ್ದರಿಂದ ನಾನು ನಿರ್ದಿಷ್ಟವಾಗಿ ಹೇಳಿದ್ದೇನೆ. ಮೈಸೂರು ಜಿಲ್ಲಾಪರಿಷತ್ತಿನಲ್ಲಿ ಔಷಧಿಗಳ ದುರುಪಯೋಗ ಇದೆ, ಗುಣಮಟ್ಟ ಕೂಡ ಕಡಿಮೆಯಾಗಿದೆ. ಇದರಿಂದಾಗಿ ರೋಗಿಗಳಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಸರ್ಕಾರಕ್ಕೆ ದೂರುಗಳು ಬಂದಿವೆ ಎಂದು ನಾನು ಹೇಳಿದ್ದೇನೆ. ಇದರ ಬಗ್ಗೆ ಮಾನ್ಯ ಮಂತ್ರಿಗಳಿಂದ ಉತ್ತರ ಬಯಸುತ್ತೇನೆ.

ಛೇರ್ಮನ್:- ಅವರು ಈಗಾಗಲೇ ಹೇಳಿದ್ದಾರೆ, ನನ್ನ ಗಮನಕ್ಕೆ ಬಂದ ತಕ್ಷಣ ವಿಚಾರ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

ಶ್ರೀ ಎಂ.ಮಹದೇವ್:- ಅವರು ಹೇಳುವುದಕ್ಕೆ ತಯಾರಿದ್ದಾರೆ. ತಾವು ಅವರಿಗೆ ಅವಕಾಶ ಕೊಡಿ.

ಡಾ.ವೈ.ನಾಗಪ್ಪ:- ಆಸ್ಪತ್ರೆಯಲ್ಲಿ ಸಿಕ್ಕತಕ್ಕ ಔಷಧಿಗಳ ಗುಣಮಟ್ಟದ ಬಗ್ಗೆ ಸಾಕಷ್ಟು ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳಿದ್ದಾರೆ. ಆದರೆ ಬಹಳಷ್ಟು ಜನರಿಗೆ ವಾಸ್ತವಾಂಶ ಏನೆಂಬುದು ಗೊತ್ತಿಲ್ಲ. ಏಕೆಂದರೆ, ಸರ್ಕಾರ ಮೊದಲೇ ಒಂದು ತೀರ್ಮಾನವನ್ನು ಏನು ತೆಗೆದುಕೊಂಡಿದೆ ಎಂದರೆ, ಯಾವ ಕಂಪೆನಿ ಅತ್ಯಂತ ಕಡಿಮೆ ಬೆಲೆಗೆ ಔಷಧಿಗಳನ್ನು ಸರಬರಾಜು ಮಾಡುತ್ತದೆಂದು ಕೇಳಿ ಕೊಟೇಷನ್ ಕರೆಯುತ್ತದೆ. Cheapest drugs this Government accepts. ಅಂದ ಮೇಲೆ ಅದರಲ್ಲಿ ಗುಣಮಟ್ಟ ಹೇಗೆ ಬರುತ್ತದೆ? For example, some Companies aspirin costs 40 rupees per thousand and another company charges Rs.200/- per thousand. The Government wants to have the cheapest quality of drugs for supply. How can you improve the standard of the drugs? Most of the Members do not this fact. ಆದುದರಿಂದ ಸರ್ಕಾರ ಇದನ್ನು ಬಿಡಬೇಕು. ಒಳ್ಳೆಯ ಗುಣಮಟ್ಟದ ಔಷಧಿಗಳು ಸಾಕಷ್ಟಿವೆ. ಒಳ್ಳೊಳ್ಳೆಯ ಕಂಪನಿಗಳಿವೆ. ಅವರಿಗೆ ಆರ್ಡರನ್ನು ಕೊಟ್ಟು ತೆಗೆದುಕೊಳ್ಳಬೇಕು. ಈಗ 30 ಸಾವಿರ ರೂಪಾಯಿಗಳ ಔಷಧಿಗಳನ್ನು ಸಪ್ಲೈ ಮಾಡುತ್ತಿರುವುದನ್ನು ಕನಿಷ್ಠ 1 ಲಕ್ಷ ರೂಪಾಯಿಗಳಿಗೆ ಏರಿಸಬೇಕಾಗುತ್ತದೆ. ಏಕೆಂದರೆ, ಕೆಲವು ಸ್ಯ್ಯಾಂಡರ್ಡ್ ಕಂಪೆನಿಗಳಿಗೆ ಆರ್ಡರ್ ಕೊಟ್ಟರೆ ಹೆಚ್ಚು ದುಡ್ಡು ಕೊಡಬೇಕಾಗುತ್ತದೆ. ಅಂಥ ಪರಿಸ್ಥಿತಿ ಇದೆ. ಆದುದರಿಂದ ಮಾನ್ಯ ಮಂತ್ರಿಗಳು ಏನು ಉತ್ತರ ಕೊಡುತ್ತಾರೋ ನೋಡೋಣ.

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ನಾಗಪ್ಪನವರು ಸ್ವತ: ವೈದ್ಯರಾಗಿದ್ದಾರೆ. ಜೊತೆಗೆ ಕಡಿಮೆ ದರದ ಔಷಧಿಗಳನ್ನು ತಯಾರಕರಿಂದ ಸರ್ಕಾರ ಕೊಂಡುಕೊಳ್ಳುವ ಪ್ರವೃತ್ತಿಯನ್ನು ಇಟ್ಟುಕೊಂಡಿದೆ, ಇದರಿಂದಾಗಿ ಉತ್ತಮವಾದ ಔಷಧಿಗಳು ರೋಗಿಗಳಿಗೆ ಸಿಕ್ಕುವುದಿಲ್ಲ ಎನ್ನತಕ್ಕ ಮಾತನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಇದು ನಿಜ. ಇದನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಈ ಸ ಗುಣಮಟ್ಟ ಮತ್ತು ದರ ಎರಡನ್ನೂ ಕೂಡ ಗಣನೆಗೆ ತೆಗೆದುಕೊಂಡು ಹೈಪವರ್ ಕಮಿಟಿಯಲ್ಲಿ ನಿರ್ಣ ಮಾಡುತ್ತಿದ್ದೇವೆ. ಕೇವಲ ಕಡಿಮೆ ದರದ ಔಷಧಿಗಳನ್ನು ಕೊಳ್ಳಬೇಕೆಂಬ ನಿಯಮ ನಮ್ಮ ಸರ್ಕಾರದಲ್ಲಿಲ್ಲ. ಅತ್ಯುತ್ತಮ ಔಷಧಿ ಮತ್ತು ದರದಲ್ಲೂ ಕಾಂಪಿಟೇಟಿವ್ ರೇಟ್ಸ್‌ನಲ್ಲಿ ತೆಗೆದುಕೊಳ್ಳಲು ಒಂದೇ ರೀತಿಯ ತಯಾರಕರಿಂದ ಕೊಟೇಷನ್ ತೆಗೆದುಕೊಳ್ಳುವುದರ ಮೂಲಕ ಅವರ ದರಗಳನ್ನು ವಿಮರ್ಶೆ ಮಾಡಿ ಉತ್ತಮ ಗುಣಮಟ್ಟ ಮತ್ತು ದರ ನಿಗದಿಮಾಡತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಈ ವ್ಯವಸ್ಥೆ ಅತಿ ಶೀಘ್ರದಲ್ಲಿ ಆಗುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಸಾದತ್ ಅಲಿ ಖಾನ್:- ಸ್ವಾಮಿ, 1988-89 ರಲ್ಲಿ ಚನ್ನಪಟ್ಟಣಕ್ಕೆ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ. 1989-90 ರಲ್ಲಿ 1,84,123 ರೂಪಾಯಿಗಳನ್ನು ಕೊಟ್ಟಿದ್ದೀರಿ, 1990-91 ಕ್ಕೆ 1.75 ಲಕ್ಷ ರಾಪಾಯಿಗಳನ್ನು ಕೊಟ್ಟಿದ್ದೀರಿ. ಮೊದಲು ಚನ್ನಪಟ್ಟಣ ಆಸ್ಪತ್ರೆಯಲ್ಲಿ 50 ಹಾಸಿಗೆಗಳು ಇದ್ದವು. ಈಗ

100 ಹಾಸಿಗೆಗಳಿಗೆ ಮಂಜೂರಾತಿಯಾಗಿದೆ. 1990ರಲ್ಲಿ ಮಾನ್ಯ ವೀರೇಂದ್ರಪಾಟೀಲರು ಅಲ್ಲಿಗೆ ಬಂದು ಶಂಕುಸ್ಥಾಪನೆ ಮಾಡಿದ್ದಾರೆ. ಪಬ್ಲಿಕ್ ಕಾಂಟ್ರಿಬ್ಯೂಷನ್‌ನಿಂದ ಸುಮಾರು 25 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಅಡಿಷನಲ್ ಆಗಿ 50 ಹಾಸಿಗೆಗಳಿಗೆ ವ್ಯವಸ್ಥೆ ಮಾಡಿದ್ದಾರೆ. ಇದು ಓಪನ್ ಮಾಡುವುದಕ್ಕೆ ಸಿದ್ಧವಾಗಿದೆ. ಇನ್ನು ಎರಡನೆಯದಾಗಿ, ಈ ಆಸ್ಪತ್ರೆಗೆ ಎಕ್ವಿಪ್‌ಮೆಂಟ್ ಮತ್ತು ಫರ್ನಿಚರ್ಸ್ ಬೇಕಾಗಿತ್ತು. ಇದನ್ನು ಜಿಲ್ಲಾಪರಿಷತ್ತಿನವರು ಕೊಡತಕ್ಕದ್ದು. 1991ರ ಜೂನ್‌ನಿಂದ ಇದುವರೆಗೂ ನಮಗೆ ಫರ್ನಿಚರ್ ಎಕ್ವಿಪ್‌ಮೆಂಟ್ ಯಾವುದೂ ಬರಲಿಲ್ಲ. ಏತಕ್ಕೆ ಬರಲಿಲ್ಲ ಎಂದರೆ, ನಮಗೆ ಬೇಕಾಗಿರತಕ್ಕದ್ದು 6 ಲಕ್ಷ ರೂಪಾಯಿಗಳ ಫರ್ನಿಚರ್ಸ್. ಆದರೆ ಅವರು ಏನು ಮಾಡಿದರೆಂದರೆ; ಮಾಗಡಿ, ರಾಮನಗರ, ದೇವನಹಳ್ಳಿಗೆ ಬೇಕೆಂದು 25 ಲಕ್ಷ ರೂಪಾಯಿಗಳ ಫರ್ನಿಚರ್ ಅನ್ನು ಪರ್ಚೇಸ್ ಮಾಡಿದ್ದಾರೆ. ಅಲ್ಲಿಗೆ ಅದು ಬೇಕಾಗಿರಲಿಲ್ಲ.

ಛೇರ್ಮನ್:- ಮಂತ್ರಿಗಳಿಂದ ನೀವು ಏನು ನಿರೀಕ್ಷಣೆ ಮಾಡುತ್ತೀರಿ ಎಂದು ಪ್ರಶ್ನೆ ಕೇಳಿ.

ಶ್ರೀ ಸಾದತ್ ಅಲಿ ಖಾನ್:- ಇದರಲ್ಲಿ ಮಿಸ್‌ಯೂಸ್ ಆಗಿದೆಯಾದ್ದರಿಂದ ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಬೇಕೆಂದು ಹೇಳುತ್ತಿದ್ದೇನೆ. 25 ಲಕ್ಷ ರೂಪಾಯಿಗಳ ಫರ್ನಿಚರ್ ಅನ್ನು ಪರ್ಚೇಸ್ ಮಾಡಿದ್ದಾರೆ. ಚನ್ನಪಟ್ಟಣದ ಆಸ್ಪತ್ರೆಗೆ ಇನ್ನೂ ಪೂರ್ತಿ ಫರ್ನಿಚರ್ ಕೊಟ್ಟಿಲ್ಲ. ಏಕೆಂದರೆ, ಇದಕ್ಕೆ ನಿಮ್ಮ ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ನಿಂದ ಕ್ಲಿಯರೆನ್ಸ್ ದೊರೆತಿಲ್ಲ. ನರ್ಸ್‌ಗಳನ್ನು ಪೋಸ್ಟ್ ಮಾಡಿಲ್ಲ. ನಾನು ಈ ಬಗ್ಗೆ ತಮ್ಮ ಹತ್ತಿರ 4-5 ಸಾರಿ ಬಂದು ನರ್ಸ್‌ಗಳನ್ನು ಪೋಸ್ಟ್ ಮಾಡಿ, 4ನೇ ದರ್ಜೆ ನೌಕರರು 40 ಜನ ಬೇಕು, ಇದನ್ನು ಮಾಡಿಕೊಡಿ ಎಂದು ಕೇಳಿಕೊಂಡಿದ್ದೇನೆ. ಸ್ಯಾಂಕ್ಷನ್ ಆಗಿರತಕ್ಕದ್ದು 100 bedded hospital in 1991. We are now going into 1992-93. ಆದುದರಿಂದ ನಾನು ಹೇಳುತ್ತಿರುವುದೇನೆಂದರೆ, ಈ 25 ಲಕ್ಷ ರೂಪಾಯಿಗಳ ಫರ್ನಿಚರ್‌ನ್ನು ಏನು ಪರ್ಚೇಸ್ ಮಾಡಿದ್ದಾರೆ ಅದು ಎಲ್ಲಾ ಕಡೆ ಬಂದಿದೆ. ಅದರೆ ಅದು ಎಲ್ಲೂ ಕೂಡ ಉಪಯೋಗಕ್ಕೆ ಬರುತ್ತಿಲ್ಲ. ನಾವು ಕೊಟ್ಟರತಕ್ಕ ಪಟ್ಟಿಯೇ ಒಂದು, ಅದರೆ ಅಲ್ಲಿ ಬಂದಿರತಕ್ಕದ್ದೇ ಇನ್ನೊಂದು, ನಾವು 6 ಅಲ್ಮೈರಾವನ್ನು ಕೇಳಿದ್ದರೆ 36 ಅಲ್ಮೈರಾಗಳನ್ನು ನಮ್ಮ ಚನ್ನಪಟ್ಟಣ ಆಸ್ಪತ್ರೆಗೆ ಕೊಟ್ಟಿದ್ದಾರೆ. ಇಷ್ಟನ್ನೂ ಇಡುವುದಕ್ಕೆ ಅಲ್ಲಿ ಜಾಗವೇ ಇಲ್ಲ. ಇನ್ನು ಬಾಕಿ ಕಡೆ ಅದೇ ರೀತಿ ಫರ್ನಿಚರ್ ಕೊಟ್ಟಿದ್ದಾರೆಂದು ಆಮೇಲೆ ನನಗೆ ಗೊತ್ತಾಯಿತು. ಈ ಫಂಡ್ಸ್ ಈ ರೀತಿ ಬಹಳ ಮಿಸ್‌ಯೂಸ್ ಮಾಡಿದ್ದಾರೆ. ಎಲ್ಲಿ ಏನು ಫರ್ನಿಚರ್ ಬೇಕಿಲ್ಲ ಆ ಫರ್ನಿಚರ್‌ಗಳನ್ನು ಕೊಟ್ಟಿರುವುದರಿಂದ ಆ ಆಸ್ಪತ್ರೆಗಳಲ್ಲಿ ಜಾಗವಿಲ್ಲದಿದ್ದರೂ ತುಂಬಿರುತ್ತಾರೆ. ಅದಕ್ಕೆ ಒಂದು ಎನ್‌ಕ್ವಯರಿ ಮಾಡಿ. ನಮಗೆ ಏನು ಇಮ್ಮಿಡಿಯೇಟ್ಲಿ ಫರ್ನಿಚರ್ಸ್ ಬೇಕೋ ಅದನ್ನು ಮತ್ತು ಆಸ್ಪತ್ರೆ ಓಪನಿಂಗಿಗೆ ನರ್ಸ್‌ಸ್, ಕ್ಲಾಸ್‌ಫೋರ್ ಎಂಪ್ಲಾಯೀಸ್, ಡಾಕ್ಟರ್ಸ್‌ನ್ನು ಪೋಸ್ಟ್ ಮಾಡಿಕೊಟ್ಟರೆ ಇಮ್ಮಿಡಿಯಟ್ಲಿ ನಾವು ಕಾಂಟೆಂಪ್ಲೇಟ್ ಮಾಡಬಹುದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷೆಯವರೇ, ಚನ್ನಪಟ್ಟಣ ಆಸ್ಪತ್ರೆಗೆ ಫರ್ನಿಚರನ್ನು ಒದಗಿಸತಕ್ಕಂಥ ಹೊಣೆಗಾರಿಕೆ ಜಿಲ್ಲಾ ಪರಿಷತ್‌ಗೆ ಸೇರಿದ್ದು. ಆದರೆ ಬೆಂಗಳೂರು ಗ್ರಾಮಾಂತರ ಜಿಲ್ಲಾಪರಿಷತ್ತಿನವರು ಬೇಕಾದಂಥ ಫರ್ನಿಚರ್‌ಗಳನ್ನು ಕೊಳ್ಳುವುದರಲ್ಲಿ ಹಣ ದುರುಪಯೋಗ ಎನ್ನತಕ್ಕಂಥ ಮಾತನ್ನು ಸನ್ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಆ ವಿಚಾರ ಸರ್ಕಾರದ ಗಮನಕ್ಕಂತೂ ಬಂದಿಲ್ಲ. ಈ ಬಗ್ಗೆ ತನಿಖೆ ಮಾಡಿಸತಕ್ಕಂಥ ಭರವಸೆಯನ್ನು ಅವರಿಗೆ ಕೊಡಬಯಸುತ್ತೇನೆ. ಮತ್ತು ಮತ್ತೊಂದು ವಿಚಾರ ಹೇಳಿದ್ದಾರೆ. 1990-91 ರಲ್ಲಿ ಸಾಕಷ್ಟು ಸ್ಯಾಫನ್ನು ಕೊಡಬೇಕು ಎಂದು ಹೇಳಿದ್ದಾರೆ. ನಾವು ಈಗಾಗಲೇ ಆರ್ಥಿಕ ಇಲಾಖೆಯಿಂದ ಅದಕ್ಕೆ ಅನುಮತಿಯನ್ನು ತೆಗೆದುಕೊಂಡಿದ್ದೇವೆ. ನೇಮಕಾತಿ ಕೆಲಸ ಕೂಡ ಮಾಡುತ್ತಿದ್ದೇವೆ. ನೇಮಕಾತಿಯಾದನಂತರವೆ ಬೇಕಾದಂಥ ಸ್ಯಾಫನ್ನು ನಾವು ಅಲ್ಲಿಗೆ ಹಾಕಿ ಕೊಡುತ್ತೇವೆ. ಅವರು ಮತ್ತೊಂದು ಮಾತನ್ನು ಹೇಳಿದರು. 1988-89 ರಲ್ಲಿ 50 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೀರಿ, 1990-91 ಕ್ಕೆ 1,75,000 ಕೊಟ್ಟಿದ್ದೀರೆಂದು ಹೇಳಿದ್ದಾರೆ. ಮೊದಲು ಸಿ.ಎಫ್.ಡಿ. ಎಂದು ಇತ್ತು. ಅದಕ್ಕೆ

ಲಿಮಿಟ್ ಇದ್ದಷ್ಟನ್ನು ಕೊಟ್ಟಿದ್ದೇವೆ. ಈಗ 100 ಬೆಡ್‌ನ ಆಸ್ಪತ್ರೆಯಾದ್ದರಿಂದ ಔಷಧಿಯನ್ನು ನಾವು ಹೆಚ್ಚು ಮಾಡಿ 1,75,000 ಔಷಧಿಯನ್ನು ಈ ವರ್ಷದಲ್ಲಿ ಒದಗಿಸಿದ್ದೇವೆ. ಸನ್ಮಾನ್ಯ ಸಾದತ್ ಅಲಿ ಯವರು ಆ ಆಸ್ಪತ್ರೆಯನ್ನು ಸರ್ವಸಜ್ಜಿತ ಆಸ್ಪತ್ರೆಯನ್ನಾಗಿ ಮಾಡಬೇಕೆಂಬ ಕಳಕಳಿಯನ್ನು ಏನು ವ್ಯಕ್ತಪಡಿಸಿದ್ದಾರೆ, ಅದಕ್ಕೆ ಸರ್ಕಾರ ಕೂಡ ಸ್ಪಂದಿಸುತ್ತದೆ. ಆದಷ್ಟು ಬೇಗ ಆ ಕೆಲಸವನ್ನು ಮಾಡಿಕೊಡುತ್ತೇವೆನ್ನುವ ಭರವಸೆಯನ್ನು ಕೊಡುತ್ತೇನೆ.

ವಿಷಯ:- ಸುಣ್ಣದ ಕಲ್ಲಿನ ಭೂಮಿಯ ಗುತ್ತಿಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 473 (758)

ಶ್ರಿ ಆರ್.ಬಿ.ತಿಮ್ಮಾಪುರ್ (ಮುಧೋಳ್) ಮಾನ್ಯ ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ ಮೈಸುರು ಮಿನರಲ್ಸ್ ಲಿಮಿಟೆಡ್‌ನವರು ಎಷ್ಟ ಸಾವಿರ ಎಕರೆ ಸುಣ್ಣದ ಕಲ್ಲಿನ ಭೂಮಿಯನ್ನು ಲೀಸ್ ಮುಖಾಂತರ ತೆಗೆದುಕೊಂಡಿದ್ದಾರೆ.

ಆ ಎಷ್ಟು ಜಮೀನನ್ನು ಉಪಯೋಗಿಸಿದ್ದಾರೆ.

ಇ ಉಪಯೋಗಿಸದ ಭೂಮಿಯನ್ನು ನಿರುದ್ಯೋಗಿ ಪದವೀಧರರಿಗೆ ಬಿಟ್ಟು ಕೊಟ್ಟು ಅವರಿಗೆ ಉದ್ಯೋಗ ಅವಕಾಶ ಕಲ್ಪಿಸುವ ವಿಚಾರ ಸರ್ಕಾರಕ್ಕೆ ಇದೆಯೇ?

ಶ್ರಿ ಎಂ.ಎಲ್.ಉಸ್ತಾದ್ (ಗಣಿ ಮತ್ತು ಭೂವಿಜ್ಞಾನ ರಾಜ್ಯ ಸಚಿವರು)

ಅ ಮೆ:ಮೈಸೂರು ಮಿನರಲ್ಸ್ ಲಿಮಿಟೆಡ್ ಅವರಿಗೆ 7,228-30 ಹೆಕ್ಟೇರ್ ಭೂಮಿಯನ್ನು ಸುಣ್ಣದ ಕಲ್ಲಿಗಾಗಿ ಲೀಸ್ ಮೂಲಕ ಕೊಡಲಾಗಿದೆ.

ಆ ಇಲಾಖೆಯಲ್ಲಿನ ದಾಖಲೆ ಪ್ರಕಾರ ಮೆ:ಮೈಸೂರು ಮಿನರಲ್ಸ್ ಲಿಮಿಟೆಡ್‌ನವರು 134.76 ಹೆಕ್ಟೇರ್ ಪ್ರದೇಶದಲ್ಲಿ ಗಣಿ ಕೆಲಸ ಮಾಡಿದ್ದಾರೆ.

ಇ ಈ ವಿಚಾರವೇನೂ ಇಲ್ಲ. ಆದರೂ ಅರ್ಹ ಅಭ್ಯರ್ಥಿಯಿಂದ ಗಣಿ ಗುತ್ತಿಗೆಗಾಗಿ ಅರ್ಜಿ ಬಂದಲ್ಲಿ ಆದ್ಯತೆಯ ಮೇರೆಗೆ ಖನಿಜ ರಿಯಾಯಿತಿ ನಿಯಮಗಳು 1960ಕ್ಕೆ ಒಳಪಟ್ಟು ಅಂತಹ ಗಣಿ ಗುತ್ತಿಗೆಯ ಅರ್ಜಿಯನ್ನು ಪರಿಗಣಿಸಲಾಗುವುದು.

ಶ್ರಿ ಆರ್.ಬಿ.ತಿಮ್ಮಾಪುರ್:- ಸನ್ಮಾನ್ಯ ಅಧ್ಯಕ್ಷರೇ, ಎಮ್.ಎಮ್.ಎಲ್.ನಿಂದ7228.30 ಹೆಕ್ಟೇರ್ ಭೂಮಿಯನ್ನು ಸುಣ್ಣದ ಕಲ್ಲುಗಾಗಿ ಲೀಸ್ ಮಾಡಿದ್ದಾರೆ. ಇದನ್ನು ಎಷ್ಟೋ ವರ್ಷಗಳಿಂದ ಲೀಸ್ ಮಾಡಿಬಿಟ್ಟಿದ್ದಾರೆ. ಅದರಲ್ಲಿ ಬರೆ134.76 ಹೆಕ್ಟೇರ್ ಉಪಯೋಗ ಮಾಡುತ್ತಿದ್ದಾರೆ. ಎಷ್ಟು ವರ್ಷ ಇದನ್ನು ಉಪಯೋಗ ಮಾಡುತ್ತಾರೆನ್ನುವುದು ಗೊತ್ತಿಲ್ಲ. ಏತಕ್ಕೆಂದರೆ, ಬರೆ 7228.30 ಹೆಕ್ಟೇರ್ ಇರುವಾಗ 134 ಹೆಕ್ಟೇರ್ ಮಾತ್ರ ಉಪಯೋಗ ಮಾಡಿದ್ದಾರೆ. ಆದ್ದರಿಂದ ಅದನ್ನು ನಿರುದ್ಯೋಗಿ ಪದವೀಧರರಿಗೆ ಲೀಸ್ ಮೂಲಕ ಕೊಟ್ಟರೆ ಉಪಯೋಗವಾಗುತ್ತದೆನ್ನುವ ಮಾತನ್ನು ಕೇಳಿದರೆ ಆ ವಿಚಾರ ಏನು ಇಲವೆಂದು ಒಂದು ಕಡೆ ಹೇಳಿದರೆ, ಇನ್ನೊಂದು ಕಡೆ ಅಂಥ ಅರ್ಹ ಅಭ್ಯರ್ಥಿಯಿಂದ ಅರ್ಜಿ ಬಂದರೆ ಪರಿಗಣಿಸಲಾಗುವುದೆಂದು ಹೇಳುತ್ತಿದ್ದಾರೆ. ಪದವೀಧರರಿಗೆ ಕೊಡುತ್ತೀರಾ ಅಥವಾ ಇಲ್ಲವೆನ್ನುವುದು ಗೊತ್ತಾಗಿಲ್ಲ. ಎಂ.ಎಂ.ಎಲ್.ರವರು ಎಷ್ಟು ವರ್ಷ ಇದನ್ನು ಉಪಯೋಗ ಮಾಡುತ್ತಾರೆನ್ನುವುದು ನಿರ್ದಿಷ್ಟವಾಗಿಲ್ಲ. ಅದನ್ನು ಕೇಳುತ್ತೇನೆ.

ಶ್ರಿ ಎಂ.ಎಲ್.ಉಸ್ತಾದ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದಾಗ, 17,204 ಎಕರೆ ಭೂಮಿ ಎಂ.ಎಮ್.ಎಲ್.ಗೆ ಲೀಸ್ ಮೇಲೆ ತೆಗೆದುಕೊಂಡಿದ್ದಾಗಿದೆ. 19 ಟೋಟಲ್‌ಲೀಸಸ್ ಆಗಿರುವುದು. ಅದರಲ್ಲಿ 5 ಲೀಸ್ ಮಾತ್ರ ಮೈಸೂರು ಮಿನರಲ್ಸ್ ವತಿಯಿಂದ ಕೆಲಸ ಮಾಡಿಸುತ್ತಿದ್ದೇವೆ. ಇನ್ನು ಸದ್ಯಕ್ಕೆ ಈ ಮಿನರಲ್ ಬಗ್ಗೆ ಅಷ್ಟೇನು ಡಿಮ್ಯಾಂಡ್ ಇಲ್ಲ. ಮತ್ತೆ ವಿಶಾಖಪಟ್ಟಣದ ಸ್ಟೀಲ್ ಪ್ಲಾಂಟ್ ಸಲುವಾಗಿ ಅವರು